# ಯಕ್ಷಗಾನದಲ್ಲಿ ಪ್ರಾಣಿಗಳ ಪಾತ್ರ ನಿರ್ವಹಣೆ

(38ನೇ ಪುಟದಿಂದ)


ಯಕ್ಷಗಾನದ ಹನುಮಂತ ವೇಷ

'ಸಿಂಹನೃತ್ಯವೆಂಬ ಸ್ವತಂತ್ರ ನೃತ್ಯ ಪ್ರಕಾರಕ್ಕೆ ಆಕ್ಷೇಪವಿಲ್ಲದಿದ್ದರೂ ಯಕ್ಷಗಾನದ ಉಳಿದ ಪಾತ್ರಗಳೊಂದಿಗೆ ಇಂಥ ಸಿಂಹಪಾತ್ರ ರಂಗಸ್ಥಳಕ್ಕೆ ಬಂದರೆ ಆಭಾಸವೇ ಆಗುತ್ತದೆ' ಎಂದು ಡಾ.ಶಿವರಾಮ ಕಾರಂತರಂಥವರೂ ಆಕ್ಷೇಪಿಸುತ್ತಿದ್ದರು.

ಆದರೆ ಇತ್ತೀಚಿನ ವರ್ಷಗಳಲ್ಲಿ ಉಡುಪಿಯ ಯಕ್ಷಗಾನ ಕೇಂದ್ರ ಸಿಂಹ ವೇಷ ಕ್ರಮವನ್ನು ಯಕ್ಷಗಾನೀಕರಣಗೊಳಿಸಿದ್ದರಿಂದ ಇಂದು ಇದೇ ಕ್ರಮ ಸಾರ್ವತ್ರಿಕವಾಗುತ್ತಲಿದೆ. ಸಿಂಹಪಾತ್ರ ಯಕ್ಷಗಾನೀಯ ಬಣ್ಣಗಾರಿಕೆ, ವೇಷಭೂಷಣ, ನೃತ್ಯಾಭಿನಯಗಳಿಂದ ರಂಗಸ್ಥಳದಲ್ಲಷ್ಟೇ ಪ್ರಸಿದ್ಧವಾದರೆ, ಜಾಂಬವಂತನ ಪಾತ್ರ ವಿಶಿಷ್ಟ ಮುಖವರ್ಣಿಕೆ, ವೇಷಗಾರಿಕೆ, ನೃತ್ಯಾಭಿನಯಗಳಿಂದ ಜನಜನಿತವಾಗಿದೆ. ಜತೆಗೆ ಜಾಂಬವಂತನ ಪಾತ್ರವು ಮಾತಿನಿಂದಲೇ ನಿರ್ಮಾಣವಾಗುವ ತಾಳ–ಮದ್ದಲೆಯಲ್ಲಿಯೂ, ಹೆಸರುವಾಸಿಯಾದ ಮಾತುಗಾರರಿಂದ ಜನಜನಿತವಾಗಿದೆ.

ಹನುಮಂತನ ಪಾತ್ರ ಕಾಣಿಸಿಕೊಳ್ಳುವ ಶರಸೇತು ಬಂಧ, ರಾಮಾಂಜನೇಯ ಯುದ್ಧ, ಲಂಕಾದಹನ ಮುಂತಾದ ಪ್ರಸಂಗಗಳು ರಂಗಸ್ಥಳದಲ್ಲಿಯೂ, ತಾಳ–ಮದ್ದಳೆಯಲ್ಲಿಯೂ ತುಂಬ ಜನಪ್ರಿಯವಾಗಿವೆ. ಹನುಮಂತ ಪಾತ್ರದ ಮುಖವರ್ಣಿಕೆ, ವೇಷಭೂಷಣ, ಪ್ರವೇಶಕ್ರಮ, ನಿಲ್ಲುವ ಭಂಗಿ, ನೃತ್ಯವಿಧಾನ ಮುಂತಾದವುಗಳಲ್ಲಿ ಯಕ್ಷಗಾನದ್ದೇ ಆದ ಕ್ರಮಗಳಿದ್ದುವೆಂದು ಕೆಲವೊಂದು ಬರಹಗಳಲ್ಲಿ ಬಂದಿದ್ದವು. ಆದರೆ ಒಂದು ಕಾಲಘಟ್ಟದಲ್ಲಿ ಯಕ್ಷಗಾನ ಹನುಮಂತ ಪಾತ್ರದ ನಿರ್ವಹಣೆಯ ಸಕಲ ಸಂಗತಿಗಳಲ್ಲಿಯೂ ಸಮಕಾಲೀನ ನಾಟಕ ಮತ್ತು ಚಲನ ಚಿತ್ರಗಳ ಪ್ರಭಾವ ಉಂಟಾಯಿತೆಂಬುದನ್ನೂ ಅವೇ ದಾಖಲೆಗಳು ಪ್ರಸ್ತುತ ಪಡಿಸುತ್ತವೆ.

ವಾಲಿ, ಸುಗ್ರೀವರಂಥ ಯಕ್ಷಗಾನ ವೇಷಗಳಿಗೆ ಬಾಲವಿರುವುದಿಲ್ಲ. ಹನುಮಂತನ ವೇಷಕ್ಕೂ ಬಾಲ ಧರಿಸುವುದು ಯಕ್ಷಗಾನದ ಕ್ರಮವಾಗಿರದೆ, ನಾಟಕದ ಅನುಕರಣೆಯೆಂಬ ವಾದವೂ ಕೇಳಿಬರತೊಡಗಿತು. ಸೌಗಂಧಿಕಾಪಹರಣ, ಲಂಕಾದಹನಗಳಂಥ ಪ್ರದರ್ಶನಗಳಲ್ಲಿ ಬಾಲ ಸಲಕರಣೆಯಾಗಿ ಬಳಕೆಗೊಳ್ಳುವುದರಿಂದ ವೇಷಕ್ಕೆ ಬಾಲ ಅಗತ್ಯವೆಂಬ ವಾದವೂ ಮುಖಾಮುಖಿಯಾಯಿತು. ಈಗ 'ಯಾವ ವೇಷಧಾರಿಯೂ ಬಾಲವಿಲ್ಲದ ಹನುಮಂತನ ವೇಷ ಧರಿಸಲಾರ; ಧರಿಸಿದರೂ ಪ್ರೇಕ್ಷಕ ಒಪ್ಪಿಕೊಳ್ಳಲಾರ. ಬಾಲವೆಂದರೆ ಹನುಮಂತ; ಹನುಮಂತನೆಂದರೆ ಬಾಲ' ಎಂಬಂತಾಗಿದೆ. ಇಂಥ ಸಣ್ಣ ಮತ್ತು ಸೂಕ್ಷ್ಮ ಸಂಗತಿಗಳೂ ಚರ್ಚೆಗೆ ಒಳಗಾಗುತ್ತವೆಯೆಂಬುದು ಯಕ್ಷ ರಂಗಭೂಮಿಯ ಜೀವಂತಿಕೆಗೆ ಸಾಕ್ಷಿ.

'ಮೀನಾಕ್ಷಿ ಕಲ್ಯಾಣ' ಕಥಾನಕದಲ್ಲಿ ಶಿವನ ವಾಹನ ನಂದಿಯ ಪಾತ್ರ ಬರುತ್ತದೆ. ರಾಜಕುವರಿ ಮೀನಾಕ್ಷಿಗೆ ಹುಟ್ಟುವಾಗಲೇ ಮೂರನೆಯ ಸ್ತನ ಕಾಣಿಸಿಕೊಳ್ಳುತ್ತದೆ. ಯಾರೊಂದಿಗೆ ಯುದ್ಧ ಮಾಡುವಾಗ ಈ ದೈಹಿಕ ವಿಕೃತಿ ಮಾಯವಾಗುವುದೋ ಅವನೇ ಪತಿಯಾಗುತ್ತಾನೆಂಬುದು ಅವಳಿಗಿರುವ ವರ. ತನ್ನ ದೈಹಿಕ ಊನವನ್ನು ನಿವಾರಿಸಿಕೊಂಡು ಗಂಡನನ್ನು ಪಡೆಯಲು ಯುದ್ಧ ಮಾಡುತ್ತಲೇ ಸಾಗುವ ಅವಳು, ಕೊನೆಗೆ ಕೈಲಾಸದ ಅಧಿಪತಿ ಶಿವನೊಂದಿಗೇ ಕಾದಾಡಬೇಕಾಗುತ್ತದೆ. ದ್ವಾರದಲ್ಲಿದ್ದ ನಂದಿಯೊಂದಿಗೂ ಹೋರಾಡಬೇಕು. ನಂದಿಯ ಪಾತ್ರಕ್ಕೆ ಪದ್ಯಗಳು, ನೃತ್ಯಗಳು, ಮಾತುಗಳೂ ಇವೆ. ಈ ಪಾತ್ರದ ಮುಖವರ್ಣಿಕೆ ವೇಷಭೂಷಣ ಪರಂಪರೆಯಿಂದಲೇ ಸಿದ್ಧಗೊಂಡು ಬಂದಿದೆ. ಅದೊಂದು ಪ್ರಾಣಿಯೇ ಆದರೂ, ಕಥಾಪಾತ್ರದಲ್ಲಿ ಅದನ್ನು ಮನುಷ್ಯೀಕರಣಗೊಳಿಸಲಾಗುತ್ತದೆ. ಈ ಪಾತ್ರದಲ್ಲಿಯೇ ಹೆಸರು ಮಾಡಿದ ಹಲವು ಕಲಾವಿದರಿದ್ದಾರೆ. ಸಾಗರ ತಾಲೂಕಿನಲ್ಲಿ 'ನಂದಿ ಪರಮಯ್ಯ' ಅಂತಲೇ ಒಬ್ಬರು ಹೆಸರುವಾಸಿಯಾದ ಕಲಾವಿದರಿದ್ದರು. ಈಗವರು ಕೀರ್ತಿಶೇಷರು.

'ರಾಜಸೂಯ' ಕಥಾಪ್ರಸಂಗದಲ್ಲಿ ಬರುವ ಪುರುಷಾಮೃಗ, ರಾಮಾಯಣದಲ್ಲಿ ಬರುವ ಜಟಾಯು, 'ಗರುಡ ಗರ್ವಭಂಗ'ದ ಗರುಡ ಮುಂತಾದ ಪಕ್ಷಿ ಪಾತ್ರಗಳಲ್ಲದೆ, ಕಾಳಿಂಗ ಮರ್ದನದ ಕಾಳಿಂಗ, ಬಭ್ರುವಾಹನದ ಸರ್ಪರಾಜನಾದ ಧೃತರಾಷ್ಟ್ರ ಮುಂತಾದ ಸರೀಸೃಪ ಪಾತ್ರಗಳೂ ಯಕ್ಷಗಾನದಲ್ಲಿ ಮನುಷ್ಯೀಕರಣಗೊಳ್ಳುತ್ತವೆ.

ನಟ ಕೇಂದ್ರಿತವಾಗಿರಬೇಕಾದ ನಾಟಕಗಳಲ್ಲಿಯೇ ಜೀವಂತ ಆನೆ, ಕುದುರೆಗಳನ್ನು ರಂಗದ ಮೇಲೆ ತಂದ ಖ್ಯಾತಿ ಕೀರ್ತಿಶೇಷ ಗುಬ್ಬಿ ವೀರಣ್ಣನವರದು. ಯಕ್ಷಗಾನ ಡೇರೆಮೇಳಗಳ ಪ್ರದರ್ಶನಗಳಲ್ಲಿಯೂ ಒಂದು ಕಾಲಘಟ್ಟದಲ್ಲಿ ಸಮುದ್ರ ಮಥನ, ಐರಾವತದಂಥ ಆಟದಲ್ಲಿ ಜನಾಕರ್ಷಣೆಗಾಗಿ ಜೀವಂತ ಆನೆಯ ಮೇಲೆ ದೇವೇಂದ್ರ ಏರಿ ಬರುವ ಸಾಹಸವೂ ನಡೆದುಹೋಯಿತು. ಇದೇ ಗೀಳು ಮುಂದುವರಿದಿದ್ದರೆ ಅನೇಕಾನೇಕ ಪ್ರಾಣಿ ಪಾತ್ರಗಳ ಬದಲು ನಿಜವಾದ ಪ್ರಾಣಿಗಳೇ ರಂಗಸ್ಥಳದಲ್ಲಿ ವಿಜೃಂಭಿಸುವಂತಾಗಿ ಡೇರೆ ಮೇಳಗಳೆಲ್ಲ ಸರ್ಕಸ್ ಕಂಪನಿಗಳಾಗುತ್ತಿದ್ದವು. ಕಾಲಕ್ರಮದಲ್ಲಿ ಈ ಚಾಳಿಗೆ ಕಡಿವಾಣ ಬಿದ್ದುದು ಸುದೈವವೆಂದೇ ಹೇಳಬೇಕು.

ಮೂಡಲಪಾಯ ಯಕ್ಷಗಾನ, ದೊಡ್ಡಾಟಗಳಿಗೂ ಭಾರತೀಯ ಪುರಾಣಗಳೇ ಮೂಲ ಆಕರ. ಅಲ್ಲಿಯೂ ಪ್ರಾಣಿ ಪಾತ್ರಗಳಿವೆ. ಅವನ್ನು ನಿರ್ವಹಿಸುವ ಬಗೆ, ವಿಘಟನೆಯ ಸವಾಲನ್ನು ಎದುರಿಸಿದ ವಿಧಾನ ಕುತೂಹಲಕಾರಿಯೇ!

ಹಲವು ಬಗೆಯ ಪ್ರಾಣಿ, ಪಕ್ಷಿ, ಕೀಟ, ಸರೀಸೃಪ ಪಾತ್ರಗಳನ್ನು ಯಕ್ಷಗಾನ ರಂಗಸಂಪ್ರದಾಯಕ್ಕೆ ಅಳವಡಿಸುವುದು ಸಾಧ್ಯವಾದರೆ ಮನುಷ್ಯೇತರ ಪಾತ್ರಗಳುಳ್ಳ ಪಂಚತಂತ್ರದಂಥ ಕಥೆಗಳನ್ನು ಯಕ್ಷಗಾನದಲ್ಲಿಯೂ ಯಕ್ಷಗಾನ ಗೊಂಬೆಯಾಟದಲ್ಲಿಯೂ ಸಂಯೋಜಿಸಬಹುದು. ತನ್ಮೂಲಕ ಮನರಂಜನೆ ಮತ್ತು ಜೀವನ ವ್ಯಾಖ್ಯಾನದ ಹೊಸ ಸಾಧ್ಯತೆಗಳನ್ನು ಈ ಕಲಾಪ್ರಕಾರದಲ್ಲಿ ಆವಿಷ್ಕರಿಸಬಹುದು.